**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 2649-2014**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

1. ಗಣೇಶ್ ವಿಜಯ್ ಕುಂದಾಪುರಕರ್, 32 ವರ್ಷ,
ತಂದೆ: ದಿ. ವಿಜಯ್ ಕುಂದಾಪುರಕರ್,

2. ರೇಣುಕಾ ಕುಂದಾಪುರಕರ್, 56 ವರ್ಷ,
ಗಂಡ: ದಿ. ವಿಜಯ್ ಕುಂದಾಪುರಕರ್,

1 ಮತ್ತು 2 ನೇಯವರ
ವಾಸ: 3 ನೇ ಕ್ರಾಸ್, ಸಾಂಬ್ರಾ ರಸ್ತೆ,
ಮಾರುತಿ ನಗರ,
ಬೆಳಗಾವಿ.

3. ಶ್ರೀಮತಿ. ದೀಪಾ ಹವಾಲಿ, 56 ವರ್ಷ,
ತಂದೆ: ದಿ. ವಿಜಯ್ ಕುಂದಾಪುರಕರ್,

4. ಮಹಂತೇಶ್ ಹವಾಲಿ, 41 ವರ್ಷ,

3 ಮತ್ತು 4 ನೇಯವರ
ವಾಸ: 5 ನೇ ಕ್ರಾಸ್, ಮನೋರಮಾ ಕುರ್ಚಿ,
ಶಾಂತಿ ನಗರ,
ಬೆಳಗಾವಿ. --- ಆರೋಪಿತರು

**:ದೋಷಾರೋಪಣೆ:**

ಶ್ರೀಮತಿ ನಾಗರತ್ನಮ್ಮ ಬಿ.ಎ.ಎಲ್., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ:

1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರನ್ನು ದಿನಾಂಕ 06-05-2009 ರಂದು ಕುಂಭಾಶಿ ಗ್ರಾಮದಲ್ಲಿರುವ ಶ್ರೀ ಜಗನ್ನಾಥ ಸಭಾಗೃಹದಲ್ಲಿ ಹಿರಿಯರ ಸಮಕ್ಷಮ ಮದುವೆ ಮಾಡಿಕೊಂಡಿದ್ದು ಮದುವೆಗೆ ಮೊದಲು ಫೆಬ್ರವರಿ ತಿಂಗಳಲ್ಲಿ 1 ರಿಂದ 3 ನೇ ಆಪಾದಿತರು ಕುಂದಾಪುರ ತಾಲೂಕು ಕೋಡಿಯಲ್ಲಿರುವ ಸಾಕ್ಷಿ 1 ನೇಯವರ ಮನೆಗೆ ಬಂದು 1 ನೇ ಸಾಕ್ಷಿದಾರರನ್ನು ನೋಡಿ ಮದುವೆ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿ 1 ನೇ ಆಪಾದಿತರಾದ ನೀವು ಸಾಕ್ಷಿ 2 ನೇಯವರಲ್ಲಿ ವರದಕ್ಷಿಣೆಯಾಗಿ 50 ಸಾವಿರ ಹಣ ಹಾಗೂ 15 ಪವನ್ ಚಿನ್ನಾಭರಣಗಳನ್ನು ಕೊಡುವಂತೆ ಒತ್ತಾಯಿಸಿ 2009 ಮಾರ್ಚ್ ತಿಂಗಳಲ್ಲಿ 1 ರಿಂದ 3 ನೇ ಆಪಾದಿತರಾದ ನೀವು ಸಾಕ್ಷಿ 2 ನೇಯವರ ಮನೆಗೆ ಬಂದು 50 ಸಾವಿರ ವರದಕ್ಷಿಣೆ ಹಣವನ್ನು ನಗದು ರೂಪದಲ್ಲಿ 1 ನೇ ಆಪಾದಿತರಾದ ನೀವು ಪಡೆದುಕೊಂಡು ಹೋಗಿದ್ದು 15 ಪವನ್ ಚಿನ್ನಾಭರಣಗಳನ್ನು ಮದುವೆ ಸಮಯ ಸಾಕ್ಷಿ 1 ನೇಯವರಿಗೂ ಹಾಗೂ 1 ನೇ ಆಪಾದಿತರಾದ ನಿಮಗೂ ಚಿನ್ನಾಭರಣಗಳನ್ನು ಮಾಡಿಸಿ ಹಾಕಿದ್ದು, ಮದುವೆಯ ನಂತರ ಸಾಕ್ಷಿ 1 ನೇಯವರು 1 ರಿಂದ 4 ನೇ ಆಪಾದಿತರಾದ ನಿಮ್ಮೊಂದಿಗೆ ಬೆಳಗಾಂ ನಲ್ಲಿರುವ ಮಾರುತಿ ನಗರ ಎಂಬಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದು ಸಾಕ್ಷಿ 1 ನೇಯವರನ್ನು 15 ದಿವಸ ಚೆನ್ನಾಗಿ ನೋಡಿಕೊಂಡು ನಂತರ 1 ನೇ ಆಪಾದಿತರಾದ ನೀವು ಸಾಕ್ಷಿ 2 ನೇಯವರ ಮನೆಗೆ ಬಂದು ಒಂದು ಬಾರಿ 50 ಸಾವಿರ ಇನ್ನೊಮ್ಮೆ 30 ಸಾವಿರ ಹಣವನ್ನು ಹೆಚ್ಚುವರಿ

ವರದಕ್ಷಿಣೆಯಾಗಿ ಒತ್ತಾಯ ಪೂರ್ವಕವಾಗಿ ಪಡೆದುಕೊಂಡಿದ್ದಲ್ಲದೇ ಸಾಕ್ಷಿ 1 ನೇಯವರಲ್ಲಿದ್ದ 15 ಪವನ್ ಚಿನ್ನಾಭರಣಗಳನ್ನು ಪಡೆದುಕೊಂಡು ಹಾಳು ಮಾಡಿದ್ದಲ್ಲದೇ 1 ರಿಂದ 4 ನೇ ಆಪಾದಿತರಾದ ನೀವುಗಳು ಸಾಕ್ಷಿ 1 ನೇಯವರನ್ನು ಚೆನ್ನಾಗಿ ನೋಡಿಕೊಳ್ಳದೇ ಮನೆಯ ಕೆಲಸವನ್ನೆಲ್ಲಾ ಮಾಡಿಸುತ್ತಾ ಅವಾಚ್ಯ ಶಬ್ದದಿಂದ ಬೈದು ಹೊಟ್ಟೆಗೆ ಸರಿಯಾಗಿ ಊಟ ಹಾಕದೆ ಸಾಕ್ಷಿ 1 ನೇಯವರಿಗೆ ಗಂಡು ಮಗುವು ಮೂಲ ನಕ್ಷತ್ರದಲ್ಲಿ ಜನಿಸಿದೆಂಬ ಕಾರಣಕ್ಕೆ 1 ರಿಂದ 4 ನೇ ಆಪಾದಿತರಾದ ನೀವುಗಳು ಮಗುವಿನ ಮುಖವನ್ನು ನೋಡದೇ ಅನಿಷ್ಟ ನಕ್ಷತ್ರದಲ್ಲಿ ಜನಿಸಿದ್ದು ಇದರಿಂದ ಕೆಟ್ಟದಾಗುತ್ತದೆ ಎಂದು, ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡಿರುತ್ತೀರಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಸಾಕ್ಷಿ 1 ನೇಯವರನ್ನುದ್ದೇಶಿಸಿ "ರಂಡೆ, ಬೇವರ್ಸಿ" ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನಗೊಳಿಸಿ ಅವರನ್ನು ಬೇರೆ ಅಪರಾಧ ಮಾಡುವಂತೆ ಪ್ರಚೋದಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರ ಕೈ ರಟ್ಟೆಗೆ ಹೊಡೆದು ಸಾಮಾನ್ಯ ತರಹದ ನೋವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರನ್ನು ಹಾಗೂ ಮಗುವನ್ನು ರೈಲ್ವೆ ಹಳಿಯ ಮೇಲೆ ದೂಡಿ ಹಾಕಿ ಸಾಯಿಸುವುದಾಗಿ ಬೆದರಿಕೆ ಹಾಕಿ ಸಾಕ್ಷಿ 1 ನೇಯವರನ್ನು ಸಾಕ್ಷಿ 2 ನೇಯರ ಮನೆಗೆ ಕಳುಹಿಸಿದ್ದು ದಿನಾಂಕ 30.09.2014 ರಂದು ಬೆಳಿಗ್ಗೆ ಸುಮಾರು 11.00 ಗಂಟೆಗೆ ಸಾಕ್ಷಿ 1 ಮತ್ತು 2 ನೇಯವರು ಮನೆಯಲ್ಲಿರುವಾಗ 1 ನೇ ಆಪಾದಿತರಾದ ನೀವು ಸಾಕ್ಷಿ 1 ನೇಯವರ ಮನೆಗೆ ಬಂದು ಸಾಕ್ಷಿ 1 ನೇಯವರನ್ನುದ್ದೇಶಿಸಿ ನೀನು ಏನಾದರು ಕೋರ್ಟಿನಲ್ಲಿ ಕೇಸು ಮಾಡಿದರೆ ನಿನ್ನನ್ನು ಹಾಗೂ ಮಕ್ಕಳನು ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 06.12.2019

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

RMS